# ಅಜ್ಜಿಯ ತೋಟದಲ್ಲಿ ಒಂದು ದಿನ

## ಅ) ಪದಗಳ ಅರ್ಥ ಬರೆಯಿರಿ. (Word Meaning)

ಧನ್ಯವಾದ = ಕೃತಜ್ಞತೆ ಅರ್ಪಿಸುವದು
ಚರ್ಚಿಸು = ವಾದಮಾಡು, ಚರ್ಚೆಮಾಡು
ವಿಶಾಲ = ವಿಸ್ತಾರ
ಪ್ರಕೃತಿ = ನಿಸರ್ಗ
ವಿಧಾನ = ರೀತಿ
ಹೆಕ್ಕು = ಆರಿಸು
ಬಹುಶಃ = ಬಹುತೇಕ
ಹಬ್ಬು = ಹರಡು
ತೋಡು = ಅಗೆ, ಬಗಿ

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ

## ಆ) ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. (Answer the following questions in one sentence)

೧. ಮಕ್ಕಳು ಎಲ್ಲಿಗೆ ಹೊರ ಸಂಚಾರ ಹೊರಟರು?

ಉ: ಮಕ್ಕಳು ಕಿಶೋರನ ಅಜ್ಜನ ತೋಟಕ್ಕೆ ಹೊರ ಸಂಚಾರ ಹೊರಟರು.

೨. ಸಾಮಾನ್ಯವಾಗಿ ಹೊಲವನ್ನು ಯಾವುದರಿಂದ ಉಳುತ್ತಾರೆ?

ಉ: ಸಾಮಾನ್ಯವಾಗಿ ಹೊಲವನ್ನು ನೇಗಿಲು , ನೊಗ , ಎತ್ತು , ಕೋಣವನ್ನು ಬಳಸಿ ಉಳುತ್ತಾರೆ.

೩. ಎರೆಗೊಬ್ಬರವನ್ನು ಯಾವುದರಿಂದ ತಯಾರಿಸುತ್ತಾರೆ ?

ಉ: ಎರೆಗೊಬ್ಬರವನ್ನು ಎರೆಹುಳದಿಂದ ಸಹಾಯದಿಂದ ತಯಾರಿಸುತ್ತಾರೆ .

೪. ತೋಟದಲ್ಲಿ ಹೆಚ್ಚಾಗಿ ಯಾವ ಗೊಬ್ಬರವನ್ನು ಬಳಸುತ್ತಿದ್ದರು ?

ಉ: ತೋಟದಲ್ಲಿ ಹೆಚ್ಚಾಗಿ ಸಾವಯವ ಗೊಬ್ಬರವನ್ನು ಬಳಸುತ್ತಿದ್ದರು .

೫. ಶೀಲಾ ಅಜ್ಜಿಯ ಮನೆಯ ಅಂಗಳದಲ್ಲಿ ಯಾವ ಯಂತ್ರವನ್ನು ನೋಡಿದಳು ?

ಉ: ಶೀಲಾ ಅಜ್ಜಿಯ ಮನೆಯ ಅಂಗಳದಲ್ಲಿ ಗದ್ದೆ ಊಳುವ ಯಂತ್ರವನ್ನು ನೋಡಿದಳು.

**ಇ) ಎರಡು - ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ. ( Answer in two – three sentences)**

೧. ಅಜ್ಜಿಯ ತೋಟದಲ್ಲಿ ಯಾವ ಯಾವ ಗಿಡಗಳಿದ್ದವು?

**ಉ**: ಅಜ್ಜಿಯ ತೋಟದಲ್ಲಿ ಅಡಿಕೆ, ತೆಂಗು, ಕಾಳುಮೆಣಸು, ಕಾಫಿ, ಏಲಕ್ಕಿ ಗಿಡಗಳಿದ್ದವು .

೨. ಉಳುಮೆಯ ಬಗ್ಗೆ ಗುರುಗಳು ನೀಡಿದ ವಿವರಣೆ ಏನು?

ಉ: ಹೊಲವನ್ನು ನೇಗಿಲು , ನೊಗ , ಎತ್ತು , ಕೋಣವನ್ನು ಬಳಸಿ ಉಳುತ್ತಿದ್ದರು. ಈಗ ಹೊಸ ಯಂತ್ರಗಳು ಬಂದಿವೆ ಎಂದು ಉಳುಮೆಯ ಬಗ್ಗೆ ಗುರುಗಳು ವಿವರಣೆ ನೀಡಿದರು.

I FOR KANNADA ಕನ್ನಡಕ್ಕಾಗಿ ಇಲ್ಲಿ ಬನ್ನಿ

೩. ಇಂಗುಗುಂಡಿಯ ಪ್ರಯೋಜನಗಳೇನು?

ಉ: ಇಂಗುಗುಂಡಿಗಳ ಮೂಲಕ ಮಳೆಯ ನೀರನ್ನು ಇಂಗಿಸಿದರೆ ಭೂಮಿಯಲ್ಲಿ ಅಂತರ್ಜಲ ಹೆಚ್ಚುತ್ತದೆ. ಇದರಿಂದ ಬಾವಿಯಲ್ಲಿ ನೀರು ಎಂದಿಗೂ ಕಡಿಮೆ ಆಗುವುದಿಲ್ಲ. ಇವು ಇಂಗುಗುಂಡಿಗಳ ಪ್ರಯೋಜನಗಳಾಗಿವೆ.

**ಈ) ವಾಕ್ಯದಲ್ಲಿ ಬಿಟ್ಟಿರುವ ಸ್ಥಳಕ್ಕೆ ಸರಿಯಾದ ಪದ ತುಂಬಿ. (Fill in the blanks)**

೧. ಕಿಶೋರನ ಅಜ್ಜಿಯ ಮನೆ ಬೆಟ್ಟದ ತಪ್ಪಲಿನಲ್ಲಿದೆ.

೨. ಮನೆಯ ಹಿಂದಿನ ಗುಡ್ಡದಲ್ಲಿ ಅಡಿಕೆ ತೋಟಗಳಿವೆ.

೩. ಮಳೆಯ ನೀರನ್ನು ಗುಂಡಿಗಳ ಮೂಲಕ ಇಂಗಿಸುತ್ತೇವೆ.

೪. ಅಜ್ಜಿ ಎಲ್ಲರಿಗೂ ಗೋಡಂಬಿ ಹಂಚಿದರು.

**ಉ) ಹೊಂದಿಸಿ ಬರೆ. (Match of the following)**

| ಅ | ಆ |
| --- | --- |
| ೧. ಎರೆಹುಳ | ಹಿರೇಕಾಯಿ |
| ೨. ಕೊಕೊ | ಭತ್ತ |
| ೩. ತೆನೆ | ಚಾಕಲೇಟು |
| ೪ ಮಳೆಕೊಯ್ಲು | ರೈತನಮಿತ್ರ |
| ೫. ಹಟ್ಟಿಗೊಬ್ಬರ | ಅಂತರ್ಜಲ |
| | ಸಾವಯವ ಗೊಬ್ಬರ |

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ

**ಊ) ಕೊಟ್ಟಿರುವ ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿ. (Make your own sentence)**

೧. ಕಿರುಚು = ಅವನು ಕಿರುಚುತ್ತಿದ್ದನು.
೨. ಹೊರ ಸಂಚಾರ = ನಾನು ಹೊರ ಸಂಚಾರಕ್ಕೆ ಹೋಗಿದ್ದೆ.
೩. ಹಾರೈಕೆ = ನಿಮಗೆ ನನ್ನ ಹಾರೈಕೆ ಇದೆ.
೪. ಹುಲುಸಾಗಿ = ಹುಲ್ಲು ಹುಲುಸಾಗಿ ಬೆಳೆದಿದೆ.

**ಋ) ಗುಂಪಿಗೆ ಸೇರದ ಪದ ಆರಿಸಿ ಬರೆಯಿರಿ. (Write the odd one out)**

೧. ತೆಂಗು, ಅಡಿಕೆ, ಬಾಳೆ, ಭತ್ತ
೨. ಮೊಲ, ಹಂದಿ, ಮುಂಗುಸಿ, ಚಿಟ್ಟೆ
೩. ಸೀಬೆಕಾಯಿ, ಸಪೋಟ, ಅನಾನಸು, ಕೊಕೊ

**ಎ) ಕೆಳಗಿನವುಗಳನ್ನು ಕೂಡಿಸಿ ಬರೆಯಿರಿ. (Join the words)**

ಒಂದು + ಆದ = ಒಂದಾದ
ಇಲ್ಲಿ + ಒಂದು = ಇಲ್ಲೊಂದು
ಹೇರಳ + ಆಗಿ = ಹೇರಳವಾಗಿ
ಹದ + ಆಗಿತ್ತು = ಹದವಾಗಿತ್ತು

**ಏ) ನಿಮ್ಮ ಶಾಲಾ ಕೈತೋಟದಲ್ಲಿ ಏನೇನು ಬೆಳೆಯಬೇಕು? ಹೇಗೆ ಬೆಳೆಸಬೇಕು? ಎಂದು ತರಗತಿಯಲ್ಲಿ ಚರ್ಚಿಸಿ ನಿಮ್ಮ ತೀರ್ಮಾನವನ್ನು ಕೆಳಗೆ ಬರೆಯಿರಿ.**

ಉ: ನಮ್ಮ ಶಾಲಾ ಕೈತೋಟದಲ್ಲಿ ನಾವು ತರಕಾರಿಗಳನ್ನು ಬೆಳೆಯಬೇಕು. ಪಾಲಕ್, ಟೊಮೇಟೊ, ಹುರುಳಿಕಾಯಿ, ಕ್ಯಾರೆಟ್, ಕೊತ್ತಂಬರಿ ಹೀಗೆ ಮುಂತಾದ ತರಕಾರಿಗಳನ್ನು ಬೆಳೆಯಬೇಕು. ನಾವು ಇದಕ್ಕೆ ನೀರನ್ನು ಹಾಕಿ ಒಳ್ಳೆಯ ಸಾವಯವ ಗೊಬ್ಬರವನ್ನು ಹಾಕಿ ಬೆಳೆಯಬೇಕು.

**ಐ) ನಿಮ್ಮ ಶಾಲೆಯಲ್ಲಿ ರೈತನೊಬ್ಬನನ್ನು ಸನ್ಮಾನಿಸುವ ಸಮಾರಂಭದ ಮುಖ್ಯ ಅತಿಥಿಯಾಗಿ ನೀನು ಮಾಡುವ ಭಾಷಣವನ್ನು ಇಲ್ಲಿ ಬರೆ. ನಂತರ ತರಗತಿಯಲ್ಲಿ ಶಿಕ್ಷಕರೆದುರು ಭಾಷಣ ಮಾಡು.**

ಉ: ನಮ್ಮ ಊರಿನ ರೈತನಾದ ರಮೇಶನು ತುಂಬಾ ಒಳ್ಳೆಯ ರೀತಿಯಲ್ಲಿ ತರಕಾರಿಗಳನ್ನು ಬೆಳೆಸಿದ್ದಾನೆ. ಸಾವಯವ ಗೊಬ್ಬರವನ್ನು ಹಾಕಿ ಯಾವುದೇ ರಾಸಾಯನಿಕ ಗೊಬ್ಬರವಿಲ್ಲದೆ ಈ ತರಕಾರಿಗಳನ್ನು ಬೆಳೆದಿದ್ದಾನೆ. ಈ ತರಕಾರಿಗಳು ಎಲ್ಲರ ಆರೋಗ್ಯಕ್ಕೆ ತುಂಬಾ ಒಳ್ಳೆಯದು. ಪ್ರತಿಯೊಬ್ಬರು ಸಾವಯವ ಕೃಷಿಯನ್ನು ಮಾಡಬೇಕು.

**ಒ) ನಿನ್ನ ಶಾಲೆಗೆ ಜಮೀನು ಕೊಟ್ಟರೆ ನೀನೇನು ಮಾಡುವೆ?**

ಉ: ನನ್ನ ಶಾಲೆಗೆ ಜಮೀನು ಕೊಟ್ಟರೆ ನಾನು ತರಕಾರಿಗಳನ್ನು ಬೆಳೆಸುತ್ತೇನೆ. ಪಾಲಕ್, ಟೊಮೇಟೊ, ಹುರುಳಿಕಾಯಿ, ಕ್ಯಾರೆಟ್, ಕೊತ್ತಂಬರಿ ಹೀಗೆ ಮುಂತಾದ ತರಕಾರಿಗಳನ್ನು ಬೆಳೆಯುತ್ತೇನೆ. ಇದಕ್ಕೆ

ನೀರನ್ನು ಹಾಕಿ ಒಳ್ಳೆಯ ಸಾವಯವ ಗೊಬ್ಬರವನ್ನು ಹಾಕಿ ಬೆಳೆಯುತ್ತೇನೆ.

**ಒ) ರೈತರು ಕೈ ಕೆಸರಾಗುತ್ತದೆ ಎಂದು ಸುಮ್ಮನೆ ಕುಳಿತರೆ ಏನಾಗಬಹುದು?**

ಉ: ರೈತರು ಕೈ ಕೆಸರಾಗುತ್ತದೆ ಎಂದು ಸುಮ್ಮನೆ ಕುಳಿತರೆ ಕೃಷಿ ಮಾಡುವುದಿಲ್ಲ. ಇದರಿಂದ ಆಹಾರವನ್ನು ಬೆಳೆಯುವದಿಲ್ಲ. ಆಗ ನಮಗೆ ಆಹಾರದ ಕೊರತೆ ಉಂಟಾಗುತ್ತದೆ.

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ